

# ಮಲ್ಲಳ್ಳಿ ಮಿಂಚುಳ್ಳಿ

■ ಕೆ.ಪಿ. ಸತ್ಯನಾರಾಯಣ

ಸೋಮವಾರಪೇಟೆಗೆ ಸಮೀಪದಲ್ಲಿ ಇರುವ ಮಲ್ಲಳ್ಳಿ ಜಲಪಾತವನ್ನು ನೋಡುವುದು ಕಣ್ಣಿಗೆ ಹಬ್ಬ. ಅಷ್ಟುಮಾತ್ರವಲ್ಲ, ಈ ಜಲಧಾರೆಯನ್ನು ನೋಡಲು ಸವೆಸುವ ಹಾದಿಯೇ ಮೈಮನಗಳನ್ನು ಮುದಗೊಳಿಸಬಲ್ಲದು.

ಬೆಳಿಗ್ಗೆ ಆರು ಗಂಟೆಗೆ ತಯಾರಾಗಿ ಹಾಸನದಿಂದ ಹೊರಟ ನಾವೂ ಎಂಟು ಗಂಟೆಗೆಲ್ಲಾ ಸೋಮವಾರಪೇಟೆಯಲ್ಲಿದ್ದೆವು. ಅಲ್ಲಿ ಉಪಾಹಾರ ಮುಗಿಸಿದ ನಂತರ ಮುಂದಿನ ಪಯಣ ಆರಂಭ. ಸೋಮವಾರಪೇಟೆಯಿಂದ 12 ಕಿ.ಮೀ. ದೂರವಿರುವ ಶಾಂತಳ್ಳಿ ಎಂಬಲ್ಲಿ ಮಾರ್ಗ ಬದಲಿಸಿ ಮತ್ತೂ 10 ಕಿ.ಮೀ. ದೂರ ಸಾಗಿದಾಗ 'ಮಲ್ಲಳ್ಳಿ ಜಲಪಾತಕ್ಕೆ' ಎಂಬ ಬೋರ್ಡು ಕಾಣಸಿಕ್ಕಿತು. ಅಲ್ಲಿಂದ ಮುಂದೆ ಕಚ್ಚಾ ರಸ್ತೆ.

ಒಂದೆರಡು ಕಿಲೋಮೀಟರ್ ಸಾಗಿದೊಡನೆ ಬೆಟ್ಟದಳ್ಳಿ ಗ್ರಾಮ ಪಂಚಾಯತಿಯವರ ಟೋಲ್‌ಗೇಟ್. ಕಾರಿಗೆ ಇಪ್ಪತ್ತೈದು, ಬೈಕಿಗೆ ಹತ್ತು ರೂಪಾಯಿ ತೆತ್ತು, ಮತ್ತೆ 3 ಕಿ.ಮೀ. ಮುಂದೆ ಹೋದೆವು. ಇನ್ನು ವಾಹನಗಳು ಮುಂದೆ ಚಲಿಸಲು ಅಸಾಧ್ಯ ಎಂಬಂತಹ ಪರಿಸ್ಥಿತಿ ಎದುರಾಯಿತು. ಹಿಂದಿನ ರಾತ್ರಿ ಚೆನ್ನಾಗಿ ಮಳೆ ಬಂದಿದ್ದುದರಿಂದ ರಸ್ತೆಯೆಲ್ಲ ರಾಡಿ. ಆ ಜಾರುವ ಕೆಸರಲ್ಲಿ ಎಲ್ಲಿ ಬೈಕು ಜಾರುತ್ತದೋ, ಕಾರು ಜರುಗುತ್ತದೋ ಎಂಬ ಭಯದಿಂದ ವಾಹನಗಳನ್ನು ಅಲ್ಲಿಯೇ ಒಂದೆಡೆ ನಿಲ್ಲಿಸಿ ಕಾಲ್ನಡಿಗೆಯಲ್ಲಿ ಮುಂದುವರೆದೆವು.

## ಸಗ್ಗದ ಸಿರಿ ಸನಿಹದಲಿ...

ಮಣ್ಣಿನ ಹಾದಿಯ ಇಕ್ಕೆಲಗಳಲ್ಲಿ ಸೊಂಪಾಗಿ ಬೆಳೆದ ಮರಗಿಡಗಳು. ದೂರದಲ್ಲಿ ಜಲಧಾರೆಯ ಸದ್ದು. ಹಕ್ಕಿಗಳ ಚಿಲಿಪಿಲಿ. ಎರಡು ಕಿಲೋಮೀಟರಿನ ಹಾದಿ ಸವೆದಿದ್ದೇ ತಿಳಿಯಲಿಲ್ಲ, ನಾವಾಗಲೇ ಜಲಪಾತದ ಸನಿಹದಲ್ಲಿದ್ದೆವು. ನಮ್ಮೆದುರಿಗೆ ಆಳವಾದ ಪ್ರಪಾತ. ನಾವಿದ್ದಲ್ಲಿಂದ ಜಲಧಾರೆಯ ಮೇಲ್ಭಾಗದ ದೃಶ್ಯ ಕಂಡುಬರುತ್ತಿತ್ತು. ಎಲ್ಲರೂ ಒಮ್ಮೆಲೇ 'ಹೋ...' ಎಂದು ಸಂತಸದ ಉದ್ಗಾರ ತೆಗೆದೆವು!

ಕೆಳಗೆ ಇಳಿಯಲು ಅಚ್ಚುಕಟ್ಟಾದ ಕಲ್ಲಿನ ಮೆಟ್ಟಿಲುಗಳಿದ್ದವು. ಆದರೆ ಮೆಟ್ಟಿಲುಗಳ ನಡುವಿನ ಅಂತರ ಕೆಲವೆಡೆ ಒಂದು ಅಡಿಗೂ ಹೆಚ್ಚು. ಹಾಗಾಗಿ ಕೆಳಗಿಳಿಯುವುದು ಸ್ವಲ್ಪ ತ್ರಾಸದಾಯಕವೇ. ಕಷ್ಟವೋ ಸುಖವೋ ಹಾದಿ ಸವೆಸಲು ನಿರ್ಧರಿಸಿದೆವು. ಹತ್ತಿರ ಹತ್ತಿರ ಮುನ್ನೂರು ಮೆಟ್ಟಿಲು ಇಳಿದೆವೆಂದರೆ ಮುಂದೆ ಕಡಿದಾದ ಕಾಲು ಹಾದಿ. ಒಂದು ಬದಿ ಎತ್ತರದ ಬೆಟ್ಟವಾದರೆ, ಬಲಬದಿ ಆಳದ ಕಣಿವೆ. ಕೆಳಗೆ ಹರಿಯುವ ನದಿ. ನಡುನಡುವೆ ಜಿನುಗುವ ನೀರಿನಿಂದಾಗಿ ಜಾರುವಿಕೆ, ಕಾಲಿಗೆ ಸಿಗುವ ಸಣ್ಣಪುಟ್ಟ ಕಲ್ಲುಗಳು, ಎಚ್ಚರಿಕೆಯಿಂದ ಇಳಿಯಬೇಕಾದ ದಾರಿ. ಜಿಗಣೆಗಳು ಮೈಗೆ ಹತ್ತದಂತೆ ಜಾಗರೂಕತೆಯಿಂದ ಇರುವ ಕಷ್ಟ ಬೇರೆ.

ಎರಡು ಫರ್ಲಾಂಗುಗಳಷ್ಟು ಕಾಲುಹಾದಿಯನ್ನು ಸವೆಸಿ ಜಲಪಾತದ ಎದುರು ನಿಂತಾಗ ಅರೆಕ್ಷಣ ಮಾತು ಮರೆತಂತಾಯಿತು. ನಮ್ಮ ಹರ್ಷೋದ್ಗಾರಗಳು ನಿಜವಾಗಿ